# ಗೀತ ಮಾರುಕಟ್ಟೆಯ ದಿಟ್ಟ

ಅವರು ದೈವಭಕ್ತರು. ಸರಕು ಸಾಗಣೆ ಕಂಪೆನಿಗಳೇ ಹೆಚ್ಚಾಗಿ ಇರುವ ಪ್ರದೇಶದ ನಡುವಿನ ಸುಸಜ್ಜಿತವಾದ ಕಟ್ಟಡದ ಅವರ ಚೇಂಬರ್ ಒಳಹೊಕ್ಕರೆ ಇದು ಸ್ಪಷ್ಟವಾಗುತ್ತದೆ. ಎಲ್ಲವೂ ನೀಟು. ಆಹ್ವಾನಿತರಿಗೆ ಅವರು ಸದಾ ಯಾವುದಾದರೂ ಒಂದು ಸೀಡಿಯನ್ನೋ, ಸೀಡಿಗಳ ಗುಚ್ಛವನ್ನೋ ಕೈಗಿಡುತ್ತಾರೆ. ಇಷ್ಟಕ್ಕೂ ಅವರು ಹಾಡುಗಳನ್ನು ಮಾರುವ ಕಂಪೆನಿಯವರಲ್ಲವೇ?

ಅವರ ಹೆಸರಿಗೂ ಅಡ್ಡ ಹೆಸರಿಗೂ ಸಂಬಂಧವಿಲ್ಲ. ಅಡ್ಡ ಹೆಸರೇ ಅವರ ಪೆಟ್ ನೇಮ್ ಆಗಿರುವುದು. ಸದಾ ಒಂದು ಲಹರಿಯಲ್ಲಿ ಮಾತನಾಡುವ ಅವರ ಕಂಪೆನಿಯ ಹೆಸರೂ ಅದೇ. ಅವರ ಅಡ್ಡ ಹೆಸರಲ್ಲೂ ದೇವರಿದ್ದಾನೆ. ನಂಬಿದ ದೇವರು ಎಂದೋ ಕೈಹಿಡಿದಿದ್ದಾನೆ. 'ಹರಿವರಾಸನಂ' ಎಂಬ ಅಯ್ಯಪ್ಪನ ಜನಪ್ರಿಯ ಗೀತೆ ಕೇಳದ ಕಿವಿಗಳು ಕಡಿಮೆ. ಐದು ಕೋಟಿಗೂ ಹೆಚ್ಚು ಮೊಬೈಲ್‌ಗಳಲ್ಲಿ ಡೌನ್ ಲೋಡ್ ಆಗಿರುವ ಆ ಹಾಡಿನ ಹಕ್ಕುಸ್ವಾಮ್ಯ ಅವರದ್ದು.

ಗೀತ ಮಾರುಕಟ್ಟೆ ಈಗ ಮೊದಲಿನಂತಿಲ್ಲ. ಹಿಂದೆ ರವಿಚಂದ್ರನ್ ಸಿನಿಮಾ ಹಾಡುಗಳು ಒಂದರ ಮೇಲೊಂದು ಹಿಟ್ ಆಗುತ್ತಿದ್ದಾಗ ತಿಜೋರಿಗೆ ಒಂದಿಷ್ಟು ಹಣ ಜಮೆಯಾದದ್ದನ್ನು ಅವರು ನೆನಪಿಸಿಕೊಂಡು ಪುಳಕಿತರಾಗುತ್ತಾರೆ. ಈಗ ಎಫ್ ಎಂ ವಾಹಿನಿಗಳ ಭರಾಟೆಯಲ್ಲಿ ಸೀಡಿ ಕೊಳ್ಳುವವರಾದರೂ ಯಾರು. ಪೆನ್ ಡ್ರೈವ್‌ಗಳಿಗೆ ಎಲ್ಲೆಲ್ಲಿಂದಲೋ ಪುಕ್ಕಟೆ ಸಂಗೀತ ಪೂರೈಕೆಯಾಗುತ್ತಿರುವುದರ ಕುರಿತು ಅವರಿಗೆ ನೋವಿದೆ.

ಅವರು ಈಗಲೂ ಒಂದು ರೀತಿಯಲ್ಲಿ ಸೀಡಿ ಕಂಪೆನಿಗಳ ಪಾಲಿಗೆ ಹಿರಿಯಣ್ಣ. ಅನುಭವ ಮುಖ್ಯವಲ್ಲವೇ, ಸ್ವಾಮಿ? ಅವರು ತಮ್ಮ ಅನುಭವ ಬಳಸಿಯೇ ಹಾಡುಗಳ ಭಂಡಾರ ಮಾಡಿದ್ದಾರೆ. ಅವರ ಹಕ್ಕಿಗೆ ಒಳಪಟ್ಟ ಹಾಡುಗಳು ಯಾವ್ಯಾವುದೋ ಮೂಲೆಯಿಂದ ಹಣ ತಂದೊಡ್ಡುತ್ತಾ ವಹಿವಾಟು ಮುಂದುವರಿಯಲು ಕಾರಣವಾಗಿವೆ. ಈಗ ಮೊದಲಿನಂತೆ ಹಾಡು ಮಾರುಕಟ್ಟೆ ಇಲ್ಲ. ಆದರೆ, ತಿಂಗಳಿಗೆ ಒಂದು ಸಿನಿಮಾದ ನಿರ್ಮಾಪಕರಾದರೂ ಅವರ ಕಚೇರಿಗೆ ಎಡತಾಕುತ್ತಾರೆ. ತಮ್ಮ ಸಿನಿಮಾ ಹಾಡುಗಳ ಸೀಡಿ ಮಾಡಿ, ಬಿಡುಗಡೆ ಮಾಡುವಂತೆ ಅಹವಾಲು ಮುಂದಿಡುತ್ತಾರೆ. ಕೆಲವರ ಪ್ರೀತಿಗೆ ಮಣಿಯುವ ಅವರು, ಇನ್ನು ಕೆಲವರಿಗೆ ಬುದ್ಧಿ ಹೇಳಿ ಕಳುಹಿಸುತ್ತಾರೆ.

ನಮ್ಮ ನಾಡಿನ ಗಾಯಕಗಾಯಕಿಯರಿಗೆ ಮನ್ನಣೆ ಸಿಗುತ್ತಿಲ್ಲವಲ್ಲ ಎಂದು ವಿಷಾದದಿಂದ ಹೇಳುವವರ ಸಾಲಿನಲ್ಲಿ ಈ ಉದ್ಯಮಿ ನಿಲ್ಲುತ್ತಾರೆ. ಇಲ್ಲಿನ ಅನುಭವಿ ಗಾಯಕಿ ಕೂಡ ಟ್ರ್ಯಾಕ್‌ಗೆ ಹಾಡಿ, ಅದರ ಸೀಡಿಯನ್ನು ತಾನೇ ತೆಗೆದುಕೊಂಡು ಚೆನ್ನೈಗೋ ಮುಂಬೈಗೋ ಹೋಗಿ, ಅಲ್ಲಿ ಪರಭಾಷಾ ಗಾಯಕಿಯಿಂದ ಅದೇ ಹಾಡನ್ನು ಮುದ್ರಿಸಿಕೊಂಡು ಬರುವ ವ್ಯಂಗ್ಯವನ್ನು ಉದಾಹರಣೆಯಾಗಿ ಕೊಡುತ್ತಾರೆ. ಸುದ್ದಿ ವಾಹಿನಿಯೊಂದರ ಪಾಲುದಾರಿಕೆಯ ಅನುಭವವನ್ನೂ ಪರೋಕ್ಷವಾಗಿ ಪಡೆದುಕೊಂಡಿರುವ ಅವರಿಗೆ 'ಪಬ್ಲಿಕ್ ಇಮೇಜ್' ಸಹ ಇದೆ.

● ವಿಶಾಖ ಎನ್.

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68